# ಸೀಟ್‌ನಿಂದ ಎದ್ದರೆ ಸ್ಪೀಕರ್‌ರಿಂದ ಚೀಟಿ

ಕರೋನಾ ಆತಂಕದ ನಡುವೆ ನಡೆಯುತ್ತಿರುವ ವಿಧಾನಸಭೆಯಲ್ಲಿ ಸೋಮವಾರ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ



ಕಾಗೇರಿ ಅಕ್ಷರಶಃ ಹೆಡ್ ಮಾಸ್ಟರ್ ರೀತಿ ಕಾರ್ಯನಿರ್ವಹಿಸಿದ್ದರು. ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು ಅಧಿವೇಶನ ನಡೆಸಲು ಸಚಿವಾಲಯದ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದರೂ, ಅನೇಕ ಶಾಸಕರು ಹಾಗೂ ಸಚಿವರು ಎದ್ದು ನಿಂತು ಮಾತನಾಡುತ್ತಿದ್ದರು. ಇಲ್ಲವೇ, ಒಬ್ಬ ಶಾಸಕರ ಕುರ್ಚಿಯ ಮೇಲೆ ಕೈ ಹಾಕಿಕೊಂಡು ಇನ್ನೊಬ್ಬರು ಮಾತನಾಡುತ್ತಿದ್ದರು. ಇದನ್ನು ಕಂಡ ಸ್ಪೀಕರ್ ಮೊದಲಿಗೆ, ಯಾರೊಬ್ಬರು ನಿಂತು ಮಾತನಾಡಬೇಡಿ ಎಂದು ಸೂಚನೆ ನೀಡಿದ್ದರು. ಆದರೂ ಕೆಲವರು ಸ್ಪೀಕರ್ ಮಾತನ್ನು ಧಿಕ್ಕರಿಸಿ, ಗುಂಪು ಕಟ್ಟಿಕೊಂಡು ಕೆಲ ಶಾಸಕರು ಹಾಗೂ ಸಚಿವರು ಮಾತನಾಡುತ್ತಿದ್ದರು. ಇದನ್ನು ಗಮನಿಸಿದ ಕಾಗೇರಿ ಅವರು, ಚೀಟಿಯ ಮೂಲಕ ಪ್ರತಿಯೊಬ್ಬ ಸದಸ್ಯರನ್ನು ಎಚ್ಚರಿಸುವ ಕೆಲಸವನ್ನು ಚಾಚುತಪ್ಪದೇ ಮಾಡಿದರು. ಆದರಲ್ಲೂ ಆಡಳಿತ ಪಕ್ಷದ ಮುಖ್ಯ ಸಚೇತಕ ಸುನೀಲ್ ಕುಮಾರ್, ಸಚಿವ ಸಿ.ಟಿ.ರವಿ ಹಾಗೂ ಹಿರಿಯ ಸದಸ್ಯರು ಇದನ್ನು ಮಾಡಿದಾಗ ಮಾರ್ಷಲ್‌ಗಳ ಮೂಲಕ ಎಚ್ಚರಿಸುವುದರೊಂದಿಗೆ, ತಾವೇ ಇನ್ನೊಮ್ಮೆ ಈ ರೀತಿ ಮಾಡದಂತೆ ಸೂಚನೆ ನೀಡಿದರು.